ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday the 17th March 1973/Phalguna 26, 1894 S.E.

The House met in the Assembly Chambers, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Power Supply to Industries

116. Sri B. G. BANAKAR (Hirekerur).—

Will the Minister for Public Works and Electricity be pleased state :—

(*a*) the total number and names of various types of industries in the State that have obtained permission from M.S.E.B. to consume electric power of 25 Horse power or more ;

(*b*) the total quantity of electricity consumed by them and the amount of consumption charged to them during the last three years

(*c*) the total amount of consumption charges actually paid by them and the amount due to be recovered from them ?

Sri H. M. CHANNABASAPPA (Minister for Public Works and Electricity).—

(*a*) Power supply to consumers including Industries is classified on the basis of Low Tension and High Tension installations and individual list of Industries consuming power of 25 HP is not maintained by the Board.

(*b*) Does not arise in view of the reply to clause (*a*).

(*c*) Does not arise.

ಶ್ರೀ ಬಿ. ಜಿ. ಬಣಕಾರ್.—ನಮ್ಮ ರಾಜ್ಯದಲ್ಲಿ ಸುಮಾರು 41,222 ಉದ್ಯಮಗಳು ಇದ್ದು ಅನೇಕ ಉದ್ಯಮಿಗಳು 50 ಹಾರ್ಸ್ ಪವರನ್ನು ಉಪಯೋಗ ಮಾಡುತ್ತಿದ್ದರೂ 40 ಹಾರ್ಸ್

(ಶ್ರೀ ಬಿ. ಜಿ. ಬಣಕಾರ್)

ಪವರ್‌ನ ಲೇಬರ್ ಹಚ್ಚಿಕೊಂಡಿದ್ದಾರೆ. ಮತ್ತೆ ಕೆಲವರು 40 ಹಾರ್ಸ್ ಪವರ್ ಉಪಯೋಗ ಮಾಡುತ್ತಿದ್ದರೂ 30 ಹಾರ್ಸ್ ಪವರ್‌ನ ಲೇಬರ್ ಹಚ್ಚಿಕೊಂಡು ಸರ್ಕಾರಕ್ಕೆ ಚೀಟಿಂಗ್ ಮಾಡುತ್ತಿದ್ದಾರೆ. ಇಂಥಾದ್ದನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಯೋಗ್ಯ ವಿಚಾರಣೆ ಮಾಡಿ ಉದ್ಯಮಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಮೋನಕೃತ್ಯಗಳು ಅಲ್ಲಲ್ಲೇ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಆಗಾಗ್ಗೆ ಬರುತ್ತಿರುತ್ತದೆ. ಆ ರೀತಿ ಬಂದಾಗ ಅವುಗಳ ಬಗ್ಗೆ ವಿಮರ್ಷೆ ಮಾಡಿ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತೇವೆ.

ಶ್ರೀ ಬಿ. ಜಿ. ಬಣಕಾರ್.—ಅನೇಕ ಕಡೆ ಉದ್ಯಮಿಗಳು 400 ಅಥವಾ 500 ಯೂನಿಟ್ ಗಳವರೆಗೆ ಕರೆಂಟನ್ನು ಉಪಯೋಗ ಮಾಡುತ್ತಿದ್ದರೂ ಸಹ ಮೀಟರನ್ನು ಬದಲಾವಣೆ ಮಾಡಿ ತಾವು ಉಪಯೋಗ ಮಾಡುತ್ತಿರುವುದು ಕೇವಲ 200 ಯೂನಿಟ್‌ಗಳು ಮಾತ್ರ ಎಂದು ತೋರಿಸುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಾರದಿದ್ದರೆ ಆ ಬಗ್ಗೆ ತನಿಖೆ ಮಾಡಿಸಿ ಅಂತಹ ಉದ್ಯಮಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂತಹ ಸಂದರ್ಭಗಳು ಕಂಡುಬಂದರೆ ಸೂಕ್ತ ಕ್ರಮವನ್ನು ಸರ್ಕಾರ ಕೈಕೊಳ್ಳುತ್ತದೆ.

ಶ್ರೀ ಬಿ. ಜಿ. ಬಣಕಾರ್.— ಈ ಉದ್ಯಮಿಗಳಿಂದ ಸರ್ಕಾರಕ್ಕೆ 6-7 ಕೋಟಿ ರೂಪಾಯಿಗಳ ವರೆಗೆ ಬಾಕಿ ಬರುವುದು ಇದೆ. ಇಷ್ಟು ಬಾಕಿ ಇಟ್ಟುಕೊಂಡಿದ್ದರೂ ಸಹ ಅಧಿಕಾರಿಗಳು ಅವರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಅದೇ ಗ್ರಾಮಾಂತರ ಪ್ರದೇಶಗಳಲ್ಲಿಯಾದರೆ ಸಣ್ಣ ಪುಟ್ಟ ಹಳ್ಳಿಯ ರೈತರು ಮತ್ತು ಮಧ್ಯಮವರ್ಗದ ಜನರು ಏನಾದರು ವಿದ್ಯುಚ್ಛಕ್ತಿಯ ಬಿಲ್‌ನ್ನು ಪಾವತಿ ಮಾಡದಿದ್ದರೆ ಕೂಡಲೇ ಮೀಟರನ್ನು ಕಿತ್ತುಕೊಂಡು ಹೋಗಿಬಿಡುತ್ತಾರೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ! ಬಂದಿದ್ದರೆ ಇನ್ನು ಮುಂದೆಯಾದರೂ ಈ ರೀತಿ ಪಕ್ಷಪಾತ ತೋರಿಸಿದಂತೆ ನೋಡಿಕೊಳ್ಳಬೇಕಲ್ಲದೆ, ಉದ್ಯಮಿಗಳಿಂದ ಬರುವ ಬಾಕಿಯನ್ನು ವಸೂಲ ಮಾಡುವುದಕ್ಕೆ ಸೂಕ್ತ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಶೇಷ ಸಂದರ್ಭಗಳಲ್ಲಿ ದೊಡ್ಡ ದೊಡ್ಡ ಉದ್ಯಮಿಗಳಿಗೆ ಹಣ ಕಟ್ಟಲು ಸ್ವಲ್ಪ ಕಾಲಾವಕಾಶದ ವಿನಾಯಿತಿಯನ್ನು ಎಂ.ಎಸ್.ಇ.ಬಿ. ಅವರು ಕೊಟ್ಟಿದ್ದಾರೆ. ವಿಶೇಷ ಕಾರಣಗಳಿಗಾಗಿ ಆ ರೀತಿ ಕೊಟ್ಟಿರುತ್ತಾರೆಯೇ ಹೊರತು ಅನಾವಶ್ಯಕವಾಗಿ ಹಣ ಬಾಕಿ ಸಿಲ್ಲುವುದಕ್ಕೆ ಅವಕಾಶ ಕೊಡುವುದಿಲ್ಲ.

Missappropriation of Amount in Kolar Taluk Scheduled Castes Housing Co-operative Society

178. Sri C. BYRE GOWDA (Vemgal).—

Will the Minister for Co-operation be pleased to state :—

(*a*) the amount sanctioned by the Kolar taluk Depressed Class Co-operative Housing Society so far to Depressed Class People of Kolar taluk for construction of houses;

(*b*) the number of houses constructed so far ;

(*c*) whether the said society has paid the amount to applicants who have not completed the construction of house ;

† Indicates that the remarks or speechs have not been revised by the member concerned.